ಓ.ಎಸ್.ನಂ.134-2012
ಪಿ.ಡಬ್ಲ್ಯೂ-2

**ದಿಃ 18-02-2016 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಸ.ಸ.ಅ. ರವರಿಂದ**

ವಾದಿ ನನಗೆ 3 ತಿಂಗಳಿನಿಂದಲೂ ಪರಿಚಯ ಇರುತ್ತಾರೆ. ವಾದಿಯ ತಂದೆಯ ಹೆಸರು ಕಣ್ಣಪ್ಪ. ದಾವಾ ಆಸ್ತಿ 79 ಸರ್ವೆನಂ.ನಲ್ಲಿ ಬರುತ್ತದೆ. ವಾದಿಯ ತಂದೆಗೆ ದಾವಾ ಆಸ್ತಿ ದರಖಾಸ್ತಿನಲ್ಲಿ ಮಂಜೂರಾಗಿರುತ್ತದೆ. ದಾವಾ ಆಸ್ತಿ ಮಾರಿಮುತ್ತು ಎಂಬುವವರು ಬಗರ್‌ಹುಖುಂ ಸಾಗುವಳಿಯಲ್ಲಿ ಇತ್ತು ಎಂದರೆ ಸರಿಯಲ್ಲ. ಸರ್ಕಾರ ಮಾರಿಮುತ್ತು ಇವರಿಗೆ 15 ವರ್ಷಗಳ ಕಾಲ ಮಾರಾಟ ಮಾಡಬಾರದೆಂಬ ಷರತ್ತು ವಿಧಿಸಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿ 2014 ರ ವರೆಗೂ ಮಾರಿಮುತ್ತು ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ವಾದಿ ದಾವಾ ಆಸ್ತಿಯ ಸಾಗುವಳಿಯಲ್ಲಿ ಇರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ** ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ. ಎ. ಒ.

ಅಧಿಕ ಪ್ರ.ದ.ನ್ಯಾ.ದಂ. ರವರು,
ತರೀಕೆರೆ.